## ಬದುಕು ಬದಲಿಸಿದ

# ಭಾವೇಶ್ ಭಾಟಿಯಾ

ಭಾವೇಶ್ ಭಾಟಿಯಾ ಎನ್ನುವುದು ಒಂದು ಹೆಸರಷ್ಟೇ ಅಲ್ಲ. ಅದು ಬದುಕಿನ ಕವಲುದಾರಿಗಳಲ್ಲಿ ಕಂಗೆಟ್ಟು ನಿಂತವರಿಗೆ ಚೈತನ್ಯ ತುಂಬುವ, ಬೆಳಕು ತೋರುವ ಸ್ಫೂರ್ತಿಯ ಚಿಲುಮೆಯೂ ಹೌದು. ಮಹಾಬಲೇಶ್ವರದ ಬೀದಿ ಬದಿಯಲ್ಲಿ ತಳ್ಳುಗಾಡಿಯಲ್ಲಿ ಮೋಂಬತ್ತಿ ಮಾರುತ್ತಿದ್ದ ಅವರು, ಇದೀಗ ಕೋಟ್ಯಂತರ ರೂಪಾಯಿ ವಹಿವಾಟು ನಡೆಸುವ 'ಸನ್‌ರೈಸ್ ಕ್ಯಾಂಡಲ್ಸ್' ಕಂಪನಿಯ ಮಾಲೀಕ. ಸ್ವತಃ ಅಂಧರಾದ ಭಾಟಿಯಾ ಅವರ ಬದುಕಿನ ದಾರಿಗೆ ಕಣ್ಣಿನ ಕತ್ತಲೆ ಅಡ್ಡಿಯಾಗಲಿಲ್ಲ. ಸಂಕಲ್ಪಶಕ್ತಿಯನ್ನೇ ಬೆಳಕಾಗಿಸಿಕೊಂಡು ಉದ್ಯಮಲೋಕದಲ್ಲಿ ಎತ್ತರಕ್ಕೆ ಬೆಳೆದರು; ತಮ್ಮೊಂದಿಗೆ ನೂರಾರು ಅಂಧರಿಗೂ ಉದ್ಯೋಗದ ಬೆಳಕು ಕಲ್ಪಿಸಿದರು. ಅವರ ಉದ್ಯಮ ಸಂಸ್ಥೆಯೊಳಗೆ, ಮ್ಯಾನೇಜ್‌ಮೆಂಟ್ ಸಂಸ್ಥೆಗಳು ಮತ್ತು ಬಿಜಿನೆಸ್ ಶಾಲೆಗಳಲ್ಲಿ ಕಲಿಸುವ ಥಿಯರಿಗಳೆಲ್ಲವೂ ಸಪ್ಪೆಯಾಗಿ ಕಾಣಿಸುತ್ತವೆ.

ಎಲ್ಲ ತಲೆಮಾರಿನ ಸಹೃದಯರಿಗೆ ಇಷ್ಟವಾಗುವ, ಯುವ ತಲೆಮಾರು ಓದಿ ಮನಗಾಣಬೇಕಾದ, ಹಿರಿಯ ಲೇಖಕಿ **ನೇಮಿಚಂದ್ರ** ಚಿತ್ರಿಸಿರುವ 'ಬದುಕು ಬದಲಿಸಿದ ಭಾವೇಶ್ ಭಾಟಿಯಾ – ಅಂಧ ಉದ್ಯೋಗ ಜನಕನ ಸಾಹಸಗಾಥೆ' ಮುಂದಿನ ವಾರದಿಂದ 'ಸುಧಾ'ದಲ್ಲಿ ಧಾರಾವಾಹಿ ರೂಪದಲ್ಲಿ ಪ್ರಕಟಗೊಳ್ಳಲಿದೆ.



**ಹೊಸ ಧಾರಾವಾಹಿ ಮುಂದಿನವಾರ ಆರಂಭ**

# ಪಕ್ಷಿನೋಟ

■ ಜರಗನಹಳ್ಳಿ ಶಿವಶಂಕರ್

ಹಕ್ಕಿಗಳು
ತಮ್ಮ ರೆಕ್ಕೆಗಳನ್ನು
ಬಡಿದು ಬಡಿದು
ಗಾಳಿಯ ಒಕ್ಕಣಿಕೆ
ಮಾಡಿದವು

ಹಕ್ಕಿಗಳು
ಮರಗಳ ಮೇಲೆ
ಹಾರಾಡುವಾಗ
ಮರಗಳು
ಚಾಮರವೆಂದು
ಖುಷಿಪಟ್ಟವು

ಅರಮನೆಗಳ ಮೇಲೆ
ಹಾರಾಡಿ ಬಂದರೂ
ಗೀಜಗನ
ಗೂಡಿನ
ವಿನ್ಯಾಸವು ಬದಲಾಗಲಿಲ್ಲ

ಹದ್ದುಗಳು
ಎಷ್ಟೇ ಮೇಲಕ್ಕೆ
ಹಾರಿದರೂ
ಮೂಗಿಗೆ ಬಡಿಯುವುದು
ಕೊಳೆತ ಮಾಂಸದ
ದುರ್ನಾತವೇ

ಮನುಷ್ಯರು
ಎತ್ತರದ ಗುಡಿ ಗೋಪುರ
ಅರಮನೆಗಳ ಕಟ್ಟಿದರೂ
ಅವುಗಳ ಮೇಲೆ
ಪಕ್ಷಿಗಳು ಕುಳಿತು
ವಿರಮಿಸುತ್ತವೆ

ಹಕ್ಕಿಗಳು
ಮುಂಜಾವಿನಲ್ಲಿ
ಹಾಡಿ ಹಾಡಿ
ಸೂರ್ಯನಿಗೆ
ದಾರಿಯ
ನೆನಪು ಮಾಡಿದವು